# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 221 |
| ಸದಸ್ಯರ ಹೆಸರು | : ಶ್ರೀ ಎಂ.ಜಿ.ಮುಳೆ |
| ಉತ್ತರಿಸುವ ಸಚಿವರು | : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು |
| ಉತ್ತರಿಸುವ ದಿನಾಂಕ | : 28.01.2026 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಬೀದರ್ ಜಿಲ್ಲೆಯ ಕೆ.ಕೆ.ಆರ್.ಟಿ.ಸಿ (KKRTC) ಘಟಕಗಳಲ್ಲಿ ಪ್ರಸ್ತುತ ಚಾಲನೆಯಲ್ಲಿರುವ ಬಸ್‌ಗಳ ಸಂಖ್ಯೆ ಎಷ್ಟು; ಅವುಗಳಲ್ಲಿ 10 ಲಕ್ಷ ಕಿ.ಮೀ ಗಿಂತ ಹೆಚ್ಚು ಸಂಚರಿಸಿದ. ಅವಧಿ ಮುಗಿದ ಬಸ್‌ಗಳ ಸಂಖ್ಯೆ ಎಷ್ಟು; | ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯಾಪ್ತಿಯ ಬೀದರ್ ಜಿಲ್ಲೆಯಲ್ಲಿ ಒಟ್ಟು 633 ಬಸ್ಸುಗಳಿದ್ದು, ಸದರಿ ಬಸ್‌ಗಳಲ್ಲಿ 10.00 ಲಕ್ಷ ಕಿ.ಮೀ ಗಳಿಗಿಂತಲೂ ಹೆಚ್ಚು ಕ್ರಮಿಸಿರುವ 317 ಬಸ್‌ಗಳಿದ್ದು, ಸದರಿ ಎಲ್ಲಾ ಬಸ್‌ಗಳು ಸುಸ್ಥಿತಿಯಲ್ಲಿ ಕಾರ್ಯಾಚರಣೆಗೊಳುತ್ತಿವೆ.<br><br>ಕೇಂದ್ರ ಸರ್ಕಾರದ ಆದೇಶದನ್ವಯ ಸರ್ಕಾರಿ ಬಸ್‌ಗಳನ್ನು ನಿರುಪಯುಕ್ತಗೊಳಿಸಲು 15 ವರ್ಷ ವಯೋಮಾನವನ್ನು ನಿಗದಿಪಡಿಸಿದ್ದು, ಸದರಿ ಅವಧಿ ಮೀರಿರುವ ಬಸ್‌ಗಳು ನಿಗಮದಲ್ಲಿ ಯಾವುದು ಕಾರ್ಯಾಚರಣೆಯಲ್ಲಿರುವುದಿಲ್ಲ.<br><br>ಮುಂದುವರೆದು, ರಾಜ್ಯದ ನಾಲ್ಕು ಸಾರಿಗೆ ನಿಗಮಗಳಲ್ಲಿ **ಈ ಕೆಳಕಂಡ ಮಾದರಿಯ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ನಿಗಧಿಪಡಿಸಿರುವ ಬಸ್ ಕ್ರಮಿಸಿರುವ ಕಿ.ಮೀ ಮತ್ತು ಬಸ್‌ಗಳ ವಯೋಮಾನದ ವಿವರ ಕೆಳಕಂಡಂತಿದೆ:-** |
| ಆ. | ಶಕ್ತಿ" ಯೋಜನೆಯ ನಂತರ ಬೀದರ್ ಜಿಲ್ಲೆಯಲ್ಲಿ ಪ್ರಯಾಣಿಕರ ಸಂಖ್ಯೆ ಶೇಕಡ ಎಷ್ಟು ಹೆಚ್ಚಾಗಿದೆ: ಈ ಹೆಚ್ಚುವರಿ ಒತ್ತಡವನ್ನು ನಿಭಾಯಿಸಲು ಜಿಲ್ಲೆಗೆ ಮಂಜೂರು ಮಾಡಲಾದ ಹೊಸ ಬಸ್‌ಗಳ ಸಂಖ್ಯೆ ಎಷ್ಟು: | |
| ಇ. | ಜಿಲ್ಲೆಯ ಗಡಿ ಭಾಗದ ಹಳ್ಳಿಗಳಿಗೆ (ತೆಲಂಗಾಣ-ಮಹಾರಾಷ್ಟ್ರ ಗಡಿ) ಸಮರ್ಪಕ ಬಸ್ ಸೌಕರ್ಯವಿಲ್ಲದೆ ಶಾಲಾ ಮಕ್ಕಳು ಖಾಸಗಿ ವಾಹನಗಳನ್ನು ಅವಲಂಬಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | |

| ಕ್ರ. ಸಂ | ವಾಹನ ತಯಾರಿಕೆ/ ಮಾದರಿ | ನಿಗಧಿಪಡಿಸಿರುವ ಕಿ.ಮೀ. /ವರ್ಷ |
|---|---|---|
| 1 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರ ತಯಾರಿಕೆಯ ಕರ್ನಾಟಕ ಸಾರಿಗೆ, ರಾಜಹಂಸ / ವೈಭವ, ನಾನ್ ಎ.ಸಿ. ಸ್ಲೀಪರ್ ವಾಹನಗಳು (ಮಿಡಿ, ಗ್ರಾಮಾಂತರ ಸಾರಿಗೆ ಮತ್ತು ದ್ವಿದ್ವಾರ ನಗರ ಸಾರಿಗೆ ಹೊರತುಪಡಿಸಿ) | 11.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 2 | ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರ ತಯಾರಿಕೆಯ ಮಿಡಿ, ಗ್ರಾಮಾಂತರ ಸಾರಿಗೆ ದ್ವಿದ್ವಾರ ನಗರ ಸಾರಿಗೆ ಹಾಗೂ ಎಲ್ಲಾ ಇಲಾಖಾ ವಾಹನಗಳು.(ಕಾರು/ಜೀಪು ಹೊರತುಪಡಿಸಿ) | 9.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 3 | ವೋಲ್ವೋ ನಗರ ಸಾರಿಗೆ ವಾಹನಗಳು | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|

| | | |
|---|---|---|
| 4 | ವೋಲ್ವೋ ಸೀಟರ್ ಮತ್ತು ಸ್ಲೀಪರ್ ವಾಹನಗಳು | 15.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 5 | ಮರ್ಸಿಡೀಸ್ ಬೆಂಜ್ ಸೀಟರ್ ವಾಹನಗಳು | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 6 | ಸ್ಕ್ಯಾನಿಯ ಸೀಟರ್ ವಾಹನಗಳು | 13.00 ಲಕ್ಷ ಕಿ.ಮೀ. ಅಥವಾ 15 ವರ್ಷ |
| 7 | ಕರೋನಾ ಎ.ಸಿ. ಮತ್ತು ನಾನ್ ಎ.ಸಿ. ಸ್ಲೀಪರ್ ವಾಹನಗಳು | 11.00 ಲಕ್ಷ ಕಿ.ಮೀ. ಅಥವಾ 15 ವರ್ಷ |

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಯಾಂತ್ರಿಕ ಇಲಾಖೆಯಿಂದ ಹೊರಡಿಸಿರುವ ಸುತ್ತೋಲೆ ಸಂಖ್ಯೆ:810/2023 ದಿನಾಂಕ:23.09.2023 ರನ್ವಯ ನಿಗಮದಲ್ಲಿ ವಾಹನಗಳನ್ನು ನಿಷ್ಕ್ರಿಯಗೊಳಿಸಲು '**ಅನುಬಂಧ**'ದಲ್ಲಿ ಸೂಚಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿರುತ್ತದೆ. ಇದಲ್ಲದೆ, ಹೆಚ್ಚಿನ ಕಿ.ಮೀ. ಕ್ರಮಿಸಿರುವ ವಾಹನಗಳ, ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ. ಮಿತಿಗಿಂತ ಹೆಚ್ಚಿನ ಕಿಮೀ ಕ್ರಮಿಸಿ, ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಬಸ್‌ಗಳಿಗೆ ಅವಶ್ಯವಿದ್ದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ಬಸ್‌ಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.

ಅಲ್ಲದೇ, ಪ್ರತಿ ವರ್ಷ ನಿಗಮದ ಬಸ್‌ಗಳನ್ನು ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಸುಸ್ಥಿತಿಯಲ್ಲಿರುವ ಕುರಿತು ಖಾತ್ರಿಪಡಿಸಿಕೊಂಡು ಕಾರ್ಯಾಚರಣೆಗೊಳಿಸಲಾಗುತ್ತಿರುತ್ತದೆ.

"ಶಕ್ತಿ ಯೋಜನೆ" ಜಾರಿಯಾದ ನಂತರ ಬೀದರ್ ಜಿಲ್ಲೆಯಲ್ಲಿ ಪ್ರಯಾಣಿಕರ ಸಂಖ್ಯೆ ಸರಾಸರಿ ಶೇ.30 ರಷ್ಟು ಹೆಚ್ಚಾಗಿರುತ್ತದೆ. ಶಕ್ತಿ ಯೋಜನೆ ನಂತರ ಪ್ರಯಾಣಿಕರ ಹೆಚ್ಚುವರಿ ಒತ್ತಡವನ್ನು ನಿಭಾಯಿಸಲು ಸದರಿ ಜಿಲ್ಲೆಗೆ 2023 ರಿಂದ ಒಟ್ಟು 131 ಹೊಸ ಬಸ್‌ಗಳನ್ನು (123 ವೇಗದೂತ, 2 ಎಸಿ ಸ್ಲೀಪರ್, 2 ನಾನ್ ಎಸಿ ಸ್ಲೀಪರ್ ಹಾಗೂ 4 ನಗರ ಸಾರಿಗೆ ಬಸ್‌ನ್ನೊಳಗೊಂಡು) ಒದಗಿಸಲಾಗಿರುತ್ತದೆ.

ಬೀದರ್ ವಿಭಾಗದಿಂದ ಒಟ್ಟು 293 ಸಾಮಾನ್ಯ ಸಾರಿಗೆಗಳಿಂದ ಒಟ್ಟು 2353 ಸುತ್ತುವಳಿಗಳನ್ನು ಜಿಲ್ಲೆ ವ್ಯಾಪ್ತಿಯ ಹಾಗೂ ಗಡಿ ಭಾಗದ ಹಳ್ಳಿಗಳು (ತೆಲಂಗಾಣ-ಮಹಾರಾಷ್ಟ್ರ ಗಡಿ) ಸೇರಿದಂತೆ ಗ್ರಾಮೀಣ ಭಾಗಗಳಿಗೆ ಕಾರ್ಯಾಚರಣೆ ಮಾಡಲಾಗುತ್ತಿದೆ. ಬೀದರ್ ವಿಭಾಗದ ವ್ಯಾಪ್ತಿಯ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| | | ಘಟಕಗಳಿಂದ ತೆಲಂಗಾಣ ರಾಜ್ಯಕ್ಕೆ ಒಟ್ಟು 105 ಅನುಸೂಚಿಗಳಿಂದ 197 ಸುತ್ತುವಳಿಗಳನ್ನು ಹಾಗೂ ಮಹಾರಾಷ್ಟ್ರ ರಾಜ್ಯಕ್ಕೆ 138 ಅನುಸೂಚಿಗಳಿಂದ 383 ಸುತ್ತುವಳಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಇರುವ ವ್ಯವಸ್ಥೆಯು ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ಅವಶ್ಯಕತೆಗನುಗುಣವಾಗಿರುತ್ತದೆ. |

ಸಂಖ್ಯೆ: ಟಿಡಿ 9 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು